


# ಸೈಬರ್ ಕ್ರೈಂ

ಕಬಂಧನೆಂಬ ರಾಕ್ಷಸ ಯೋಜನ ಯೋಜನಗಳ ದೂರದಿಂದಲೇ ತನ್ನ ಕೈಗಳನ್ನು ಚಾಚಿ ಪ್ರಾಣಿಗಳನ್ನೂ ಮನುಷ್ಯರನ್ನೂ ಸೆಳೆದುಕೊಂಡು ಬಾಯಿಗೆ ತುರುಕಿಕೊಳ್ಳುತ್ತಿದ್ದನಂತೆ. ರಾಮಾಯಣದ ಈ ಕಥೆ ಇಂದಿನ ಡಿಜಿಟಲ್ ವಂಚನೆಯ ಜಗತ್ತಿಗೂ ಅನ್ವಯಿಸುವಂತಿದೆ. ನಾವು ನೋಡದ, ನಮ್ಮಿಂದ ನೂರಾರು ಸಾವಿರಾರು ಮೈಲಿ ದೂರವಿರುವ ವ್ಯಕ್ತಿಗಳು ಅಂತರ್ಜಾಲದ ಮೂಲಕ ಕಬಂಧಬಾಹುಗಳಂತೆ ತಮ್ಮ ಕರಾಳಹಸ್ತಗಳನ್ನು ಚಾಚಿ, ನಮ್ಮ ಮಾಹಿತಿಯನ್ನೂ ಹಣವನ್ನೂ ದೋಚುತ್ತಿದ್ದಾರೆ. ಅಂಥ ಸೈಬರ್ ಕಳ್ಳರನ್ನು 'ಆಧುನಿಕ ಕಬಂಧರು' ಎನ್ನಬಹುದೇನೋ?

2002ನೇ ಇಸವಿ. ಅನಿವಾಸಿ ಭಾರತೀಯರಿಗಾಗಿ 'ಸೋನಿ' ಕಂಪನಿ ಎಲೆಕ್ಟ್ರಾನಿಕ್ ಉಪಕರಣಗಳ ಆನ್‌ಲೈನ್ ಮಳಿಗೆ ಆರಂಭಿಸಿತ್ತು. ಹೆಸರು 'ಸೋನಿ–ಸಂಬಂಧ ಡಾಟ್ ಕಾಮ್'. ವಿದೇಶದಲ್ಲಿ ಇರುವವರು ಭಾರತದಲ್ಲಿರುವ ತಮ್ಮವರಿಗಾಗಿ ಉಪಕರಣಗಳನ್ನು ಖರೀದಿಸಿ ಕಳುಹಿಸುವ ಸವಲತ್ತನ್ನು ಈ ಮಳಿಗೆ ಕಲ್ಪಿಸಿತ್ತು. ಬಾರ್ಬರಾ ಕಂಪಾ ಎನ್ನುವವರು ಬಣ್ಣದ ಸೋನಿ ಟಿ.ವಿ. ಹಾಗೂ ಕಾರ್ಡ್‌ಲೆಸ್ ಹೆಡ್‌ಫೋನ್ ಖರೀದಿಸಿದರು. ಹಣ ತುಂಬಲು ತಮ್ಮ ಕ್ರೆಡಿಟ್ ಕಾರ್ಡ್ ಮಾಹಿತಿ ನೀಡಿದರು. ದೆಹಲಿಯ ನೋಯ್ಡಾದಲ್ಲಿರುವ ಆರೀಫ್ ಆಜೀಮ್ ಅವರ ಮನೆ ವಿಳಾಸಕ್ಕೆ ಟಿ.ವಿ. ಹಾಗೂ ಹೆಡ್‌ಸೆಟ್ ತಲುಪಿದವು.

ಕಂಪನಿಯು ತನ್ನ ದಾಖಲೆಗಾಗಿ ವಸ್ತುಗಳನ್ನು ನೀಡಿರುವುದಕ್ಕೆ ಫೋಟೊ ತೆಗೆದುಕೊಂಡಿತ್ತು. ಅದರೊಂದಿಗೆ ಆ ವ್ಯವಹಾರ ಮುಗಿದಿತ್ತು. ಆದರೆ ಆ ವ್ಯವಹಾರದ ಮತ್ತೊಂದು ಮುಖ ಅನಾವರಣಗೊಂಡಿದ್ದು ಒಂದೂವರೆ ತಿಂಗಳ ನಂತರ. ಕ್ರೆಡಿಟ್ ಕಾರ್ಡ್ ಕಂಪನಿಯು ಸೋನಿ ಸಂಸ್ಥೆಗೆ ಪತ್ರವೊಂದನ್ನು ಬರೆದು, 'ಇದೊಂದು ಅನಧಿಕೃತ ವ್ಯವಹಾರ. ಕಾರ್ಡ್‌ನ ಅಸಲಿ ಮಾಲೀಕರು ಇಂಥ ಯಾವುದೇ ಖರೀದಿಯನ್ನು ತಾನು ಮಾಡಿಲ್ಲವೆಂದು ಹಣ ಪಾವತಿಸಲು ನಿರಾಕರಿಸಿದ್ದಾರೆ' ಎಂದು ತಿಳಿಸಿತು. ಮುಂದಿನದು ವಿಚಾರಣೆಯ ಕಥೆ.

ತನಿಖೆಯ ನಂತರ ಟಿ.ವಿ. ಹಾಗೂ ಹೆಡ್‌ಫೋನ್ ಪಡೆದ ಆರೀಫ್ ಆಜೀಮ್‌ನನ್ನು ಪೊಲೀಸರು ಬಂಧಿಸಿದರು. ವಂಚನೆ ಪ್ರಕರಣದ ಅನ್ವಯ ಬಂಧನವೂ ಆಯಿತು. ತನಿಖೆಯಲ್ಲಿ ತಿಳಿದು ಬಂದ ಸಂಗತಿ ಎಂದರೆ, ನೋಯ್ಡಾದ ಕಾಲ್‌ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದ 24 ವರ್ಷದ ಆತ, ಅಮೆರಿಕದ ವ್ಯಕ್ತಿಯೊಬ್ಬರ ಕ್ರೆಡಿಟ್ ಕಾರ್ಡ್‌ನ ಗೋಪ್ಯ ಮಾಹಿತಿ ಪಡೆದು, ಅದನ್ನು ದುರ್ಬಳಕೆ ಮಾಡಿಕೊಂಡಿದ್ದ. ಆತನಿಗೆ ನ್ಯಾಯಾಲಯ ಒಂದು ವರ್ಷದ ಜೈಲು ಶಿಕ್ಷೆ ವಿಧಿಸಿತು. 'ಸೈಬರ್ ವಂಚನೆ'ಗೆ ಸಂಬಂಧಿಸಿದಂತೆ ಶಿಕ್ಷೆಯಾಗಿರುವ ಮೊದಲ ಪ್ರಕರಣವಿದು.

ಇದಾದ ನಂತರ 'ಕಾಸ್ಮಸ್ ಬ್ಯಾಂಕ್' ಮೇಲೆ ನಡೆದ ಸೈಬರ್ ದಾಳಿಯಲ್ಲಿ, ಹಾಂಗ್‌ಕಾಂಗ್‌ನಲ್ಲಿರುವ ಬ್ಯಾಂಕ್ ಖಾತೆಗೆ ₹ 94 ಕೋಟಿ ವರ್ಗಾವಣೆಗೊಂಡಿತ್ತು. ಹ್ಯಾಕರ್‌ಗಳು ಬ್ಯಾಂಕ್‌ನ ಗ್ರಾಹಕರ ಮಾಹಿತಿ ಪಡೆದು, ಪೇಮೆಂಟ್ ಗೇಟ್‌ವೇ ಎಂಬ ಹಣ ವರ್ಗಾವಣೆ ಮಾರ್ಗದ ಬಾಗಿಲು ಮುರಿದಿದ್ದರು; 28 ರಾಷ್ಟ್ರಗಳ 450 ಕಾರ್ಡ್‌ಗಳನ್ನು ಬಳಸಿ, 14 ಸಾವಿರ ಬಾರಿ ಹಣವನ್ನು ವರ್ಗಾಯಿಸಿಕೊಂಡಿದ್ದರು.

2009ರಲ್ಲಿ ಬೆಂಗಳೂರಿನಲ್ಲಿ 15 ವರ್ಷದ ಬಾಲಕನೊಬ್ಬ ಮುಂಬೈನ 5 ಕಡೆ ಬಾಂಬ್ ಇಟ್ಟಿರುವುದಾಗಿ ಇ–ಮೇಲ್ ಮೂಲಕ ಬೆದರಿಕೆ ಮೇಲ್ ಕಳುಹಿಸಿದ್ದ. ಆ ಕಿಡಿಗೇಡಿ ಹುಡುಗನನ್ನು ಐ.ಪಿ. (ಇಂಟರ್‌ನೆಟ್ ಪ್ರೊಟೊಕಾಲ್) ವಿಳಾಸದ ಮೂಲಕ ಪೊಲೀಸರು ಪತ್ತೆ ಮಾಡಿದರು.

ಮೇಲಿನವು, 'ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ' ಪ್ರಕಟಿಸಿರುವ ಕೆಲವೊಂದು